ಸಿ.ಸಿ. ನಂ.16/2024 ಪಿ. ಡಬ್ಲ್ಯೂ: 1 ಶಿಲ್ಪಾ ಗಂಡ ರಾಮಪ್ಪ ಕಂಪಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08-12-2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃಶ್ರೀ.ಟಿ.ಬಿ.ಎಸ್. ಆರೋಪಿ ಪರ ವಕೀಲರಿಂದಃ**

ನನ್ನ ಮದುವೆಯು ದಿಃ 04-03-2018 ರಂದು ಆಗಿರುತ್ತದೆ. 1 ನೇ ಆರೋಪಿಯೊಂದಿಗೆ ನಾನು ಒಟ್ಟು 4 ವರ್ಷಗಳ ಕಾಲ ಸುಖ ಸಂಸಾರ ಜೀವನ ನಡೆಸಿದ್ದೇನೆ. ಸನ್ 2019 ರಲ್ಲಿ ಕೊಪ್ಪಳ ತಾಲೂಕು ಗಿಣಿಗೇರಿ ಗ್ರಾಮದಲ್ಲಿ ನನ್ನ ಗಂಡ ನೌಕರಿ ಮಾಡುವಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇವು. ಮಾರ್ಚ 2023 ರವರೆಗೆ ಗಿಣಿಗೇರಿ ಗ್ರಾಮದಲ್ಲಿ ವಾಸವಿದ್ದೇವು. ಮಾರ್ಚ 2023 ರಲ್ಲಿ ಜಗಳ ಪ್ರಾರಂಬವಾಗಿರುತ್ತದೆ, ತಾರೀಖು ನೆನಪಿಲ್ಲ. ಜಗಳವಾದ ನಂತರ ದಾಸನಾಳ ಗ್ರಾಮಕ್ಕೆ ಹೋಗಿರುತ್ತೇನೆ. ನನ್ನ ಗಂಡನ ನನ್ನ ಹೆಂಡತಿ ಕಾಣೆಯಾಗಿದ್ದಾಳೆ ಎಂದು ದೂರು ನೀಡಿದ್ದು, ಪೊಲೀಸರು ಮತ್ತು ನನ್ನ ಸಂಬಂಧಿಕಾರು ಹಿರಿಯರು ಪೋನ ಮಾಡಿ ಹೇಳಿದ್ದರಿಂದ ನಾನು ದಾಸನಾಳ ದಿಂದ ಗಿಣಿಗೇರಿಗೆ ಬಂದಿರುತ್ತೇನೆ. ಸದರಿ ವಿಷಯವನ್ನು ನಾನು ನನ್ನ ದೂರಿನಲ್ಲಿ ಹೇಳಿ ಬರೆಸಿಲ್ಲ. ದಿಃ 06-06-2023 ರಂದು 13 ನೇ ಆರೋಪಿ ನನ್ನ ಜೊತೆ ಅಸಭ್ಯವಾಗಿ ವರ್ತಿಸಿದ್ದ ಎನ್ನುವ ಕಾಲಕ್ಕೆ ನನ್ನ ಗಂಡ ಕೆಲಸಕ್ಕೆ ಹೋಗಿದ್ದ. ದಿಃ 07-06-2023 ರಂದು ಬೆಳಿಗ್ಗೆ ನನ್ನ ಗಂಡ ಮನೆಗೆ ಬಂದಿರುತ್ತಾನೆ. ದಿಃ 06-06-2023 ರಂದು 13 ನೇ ಆರೋಪಿ ನನ್ನ ಜೊತೆ ಅಸಭ್ಯವಾಗಿ ವರ್ತಿಸಿದ್ದ ಮತ್ತು ಮರು ದಿನ ನನ್ನ ಗಂಡ ಬಂದ ನಂತರ ನಾನು ಹೇಳಿದೆ ಎಂದು ಉದ್ದೇಶ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ, ನನ್ನ ಅತ್ತೆ, ಮಾವ, ಅಣ್ಣ, ಅತ್ತಿಗೆಯವರಿಗೆ ಹೊಂದಾಣಿಕೆ ಆಗದ ಕಾರಣ ನನ್ನ ಗಂಡ ನನ್ನನ್ನು ಡಿಸೇಂಬರ 2023 ರ ವರೆಗೆ ಗಿಣಗೇರಿಯಲ್ಲಿ ಮನೆ ಮಾಡಿ ಇರಿಸಿದ್ದ ಎಂದರೆ ಸರಿಯಲ್ಲ. ಡಿಸೇಂಬರ 2023 ರವರೆಗೂ ನಾನು ನನ್ನ ಗಂಡ ಇಬ್ಬರೆ ಗಿಣಗೇರಿಯಲ್ಲಿ ಇದ್ದರೂ ಸಹಿತ ಉದ್ದೇಶ ಪೂರಕವಾಗಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ನರೆಗಲ ಪೊಲೀಸ ಠಾಣೆಯಲ್ಲಿ ಕೊಟ್ಟಿದ್ದು, ದಿನಾಂಕ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಜೂನ್ 2023 ರಲ್ಲಿ ದೂರು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ನಾನು ನನ್ನ ಕೈಬರಹದಲ್ಲಿ ಬರೆದುಕೊಟ್ಟಿರುತ್ತೇನೆ. ನನ್ನ ಗಂಡನ ಸಹೋದರರು ಒಟ್ಟು 4 ಜನ, ಒಬ್ಬ ಸಹೋದರಿ ಇರುತ್ತಾಳೆ. ನನ್ನ ಗಂಡನ 4 ಜನ ಸಹೋದರರು ಬೇರೆ ಬೇರೆ ವಾಸವಿದ್ದಾರೆ ಎಂದರೆ ಸಾಕ್ಷಿಯು ಕೂಡಿ ಇರುತ್ತಾರೆ ಎಂದು ನುಡಿಯುತ್ತಾರೆ. 3 ನೇ ಆರೋಪಿ ನನ್ನ ಗಂಡನ ಅತ್ತಿಗೆ. 2 ನೇ ಆರೋಪಿ ನನ್ನ ಗಂಡನ ಹಿರಿಯ ಅಣ್ಣ. 5 ನೇ ಆರೋಪಿ ನನ್ನ ಗಂಡನ ದೊಡ್ಡಪ್ಪನ ಮಗ. 6 ನೇ ಆರೋಪಿ ನನ್ನ ಗಂಡನ ಅತ್ತಿಗೆ. 7 ರಿಂದ 9 ನೇ ಆರೋಪಿತರು ನನ್ನ ಗಂಡನ ಅಣ್ಣನ ಮಕ್ಕಳು. 13 ನೇ ಆರೋಪಿ ನನ್ನ ಗಂಡನ ದೊಡ್ಡಮ್ಮನ ತಂಗಿ ಮಗ. 13 ನೇ ಆರೋಪಿ ಖಾಯಂ ಲಕ್ಕಲಕಟ್ಟಿಯಲ್ಲಿ ಇರುತ್ತಾನೆ ಎಂದರೆ ಸರಿ. ನನ್ನ ಗಂಡನ ದೊಡ್ಡಪ್ಪನ ಮಕ್ಕಳು ಬೇರೆ

ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. 13 ನೇ ಆರೋಪಿ ಆಗಾಗಾ ಹಡಗಲಿ ಗ್ರಾಮಕ್ಕೆ ಬರುತ್ತಿದ್ದ ಎಂದು ಉದ್ದೇಶ ಪೂರಕವಾಗಿ ನನ್ನ ದೂರಿಗೆ ಸಹಾಯವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 13 ನೇ ಆರೋಪಿ ದಿಃ 07-06-2023 ರಂದು ಹಡಗಲಿಗೆ ಬಂದಿದ್ದ. 13 ನೇ ಆರೋಪಿ ಬೇರೆ ಯಾವ ದಿನಾಂಕದಂದು ಬಂದಿದ್ದ ಎಂದು ನೆನಪಿಲ್ಲ. 13 ನೇ ಆರೋಪಿ ದೂರಿನಲ್ಲಿ ಹೇಳಿದಂತೆ ಯಾವುದೇ ಘಟನೆಗೆ ಸಂಬಂಧಿಸಿದಂತೆ ಹಡಗಲಿ ಗ್ರಾಮಕ್ಕೆ ಬಂದಿಲ್ಲ, ಆತನು ಬಂದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.
Sd/-
(ಹುಲುಗಪ್ಪ ಡಿ.)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.